# ಮನೋಬಲದ ಶಕ್ತಿಯಲ್ಲಿ ಗೆದ್ದು...

ಸತತ ಪ್ರಯತ್ನ, ಆತ್ಮವಿಶ್ವಾಸ ಮತ್ತು ದೃಢಸಂಕಲ್ಪವಿದ್ದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಜೀವಂತ ಸಾಕ್ಷಿಯಾಗಿರುವುದು ಶಿರಸಿ ತಾಲ್ಲೂಕಿನ ಮರ್ಲಮನೆಯ ಪ್ರೀತಿ ವಿನಾಯಕ ಹೆಗಡೆ.

ರಾಷ್ಟ್ರಮಟ್ಟದಲ್ಲಿ ಹೆಸರು ಮೂಡಿಸಿರುವ ಹೆಮ್ಮೆಯ ಯುವತಿ. ಗುಜರಾತಿನ ಅಹಮದಾಬಾದ್‌ನಲ್ಲಿ ನಡೆದ 10ನೇ ರಾಷ್ಟ್ರೀಯ ಡೆಫ್ ಸಬ್ ಜ್ಯೂನಿಯರ್ ಮತ್ತು ಸೀನಿಯರ್ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್‌ನಲ್ಲಿ ಎತ್ತರ ಜಿಗಿತ ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಪಡೆದು ರಾಜ್ಯಕ್ಕೆ ಕೀರ್ತಿ ತಂದರು. ಈ ಸಾಧನೆ ಸುಲಭವಾಗಿರಲಿಲ್ಲ. ಪ್ರೀತಿ ಬಾಲ್ಯದಿಂದಲೇ ಶ್ರವಣದೋಷ, ವಾಕ್ ದೋಷದ ಸಮಸ್ಯೆ ಎದುರಿಸುತ್ತಿದ್ದರು. ಈ ಸಮಸ್ಯೆ ಮಕ್ಕಳಲ್ಲಿ ಆತ್ಮವಿಶ್ವಾಸ ಕುಗ್ಗಿಸುವುದೇ ಹೆಚ್ಚು. ಆದರೆ ಪ್ರೀತಿ ಅದನ್ನು ದೌರ್ಬಲ್ಯವೆಂದು ಪರಿಗಣಿಸಲಿಲ್ಲ.

ವಿಶೇಷ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಮಾತಿನ ಸಮಸ್ಯೆಯನ್ನು ಗೆದ್ದುಬಂದರು. ಸರ್ಕಾರಿ ಪ್ರಾಥಮಿಕ ಶಾಲೆಯಿಂದ ಆರಂಭವಾದ ವಿದ್ಯಾಭ್ಯಾಸ, ಜಗದಾಂಬಾ ಹೈಸ್ಕೂಲ್, ಬಳಿಕ ಕೊಳಗಿಬೀಸ್ ಪಿಯುಸಿ ಮತ್ತು ಹುಬ್ಬಳ್ಳಿಯ ಎಸ್‌ಜೆಎಂವಿಎಸ್ ಮಹಿಳಾ ಕಾಲೇಜಿನಲ್ಲಿ ಬಿ.ಕಾಂ. ಪದವಿವರೆಗೆ ಕರೆದೊಯ್ದಿತು. ಎತ್ತರ ಜಿಗಿತ ಮತ್ತು ಓಟದಲ್ಲಿ ಆಸಕ್ತಿ ಬೆಳೆಸಿಕೊಂಡ ಪ್ರೀತಿ, ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಎತ್ತರ ಜಿಗಿತದಲ್ಲಿ ಪ್ರಥಮ ಸ್ಥಾನ ಮತ್ತು 200 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ ಪಡೆದರು.

ಬೆಂಗಳೂರಿನಲ್ಲಿ ಎರಡು ತಿಂಗಳ ತರಬೇತಿ ಪಡೆದ ನಂತರ, ರಾಷ್ಟ್ರಮಟ್ಟದಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿ ಮೂರನೇ ಸ್ಥಾನ ಪಡೆದರು. ಒಂದು ಸಣ್ಣ ಗ್ರಾಮದ ಹುಡುಗಿ, ತನ್ನ ದೌರ್ಬಲ್ಯವನ್ನು ಮೀರಿ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿರುವುದು ಇಂದಿನ ಯುವಪೀಳಿಗೆಗೆ ಪಾಠ. ಜೀವನದಲ್ಲಿ ಗೆಲ್ಲುವುದು ಮನೋಬಲದಿಂದ ಎಂಬುದನ್ನು ತೋರಿಸಿ ಮಾದರಿಯಾಗಿದ್ದಾರೆ.

—ಕೆ.ಎಂ. ಪವಿತ್ರಾ, ಮುರ್ಡೇಶ್ವರ



# ಎಲೆಮರೆಕಾಯಿಯಂಥ ಸೋಬಾನೆ ಗಾಯಕಿ ಕೆಂಚಮ್ಮ

‘ಜನವಾಣಿ ಬೇರು, ಕವಿವಾಣಿ ಹೂವು’ ಎಂಬ ಬೇಂದ್ರೆಯವರ ಮಾತು ಜನಪದ ಸಾಹಿತ್ಯದ ಮಹತ್ವವನ್ನು ತಿಳಿಸುತ್ತದೆ. ಅನುಭವ ಮತ್ತು ಅನುಭಾವಗಳ ಹಿನ್ನೆಲೆಯಿಂದ ಮೂಡಿಬಂದಿರುವ ಜನಪದ ಸಾಹಿತ್ಯವು ಜೀವನಕ್ಕೊಂದು ದಾರಿದೀವಿಗೆ. ವಿಶೇಷವಾಗಿ ಕನ್ನಡ ಜನಪದ ಸಾಹಿತ್ಯದ ವೈವಿಧ್ಯಮಯ ಪ್ರಕಾರಗಳಾದ ಭಜನೆ, ಕೋಲಾಟ, ದೊಡ್ಡಾಟ, ಬೀಸೋಕಲ್ಲಿನ ಪದ, ಸೋಬಾನೆ ಪದ ಮೊದಲಾದವು ಕನ್ನಡದ ಶ್ರೀಮಂತ ಸಾಂಸ್ಕೃತಿಕ ಹೆಗ್ಗುರುತುಗಳು.

ತಾನು ಅನಕ್ಷರಸ್ಥಳಾಗಿದ್ದರೂ ಅವರಿವರು ಹಾಡುತ್ತಿದ್ದ ಸೋಬಾನೆ ಪದಗಳನ್ನು ಗಮನವಿಟ್ಟು ಕೇಳಿಸಿಕೊಂಡು, ಹಾಡುವುದನ್ನು ಕರಗತ ಮಾಡಿಕೊಂಡವರು ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಗೆದ್ದಲಗಟ್ಟೆ ಗ್ರಾಮದ ಸೋಬಾನೆ ಗಾಯಕಿ ಕೆಂಚಮ್ಮ. ಊರಿನಲ್ಲಿ ಜರುಗುವ ಎಲ್ಲಾ ಜನಾಂಗದ ವಿವಾಹಗಳ ಸಂದರ್ಭದಲ್ಲಿ ಕೆಂಚಮ್ಮ ಮತ್ತು ಸಂಗಡಿಗರ ‘ಸೋಬಾನೆ ತಂಡ’ ಸೋಬಾನೆ ಪದ ಹಾಡಲು ಸಿದ್ಧವಿರುತ್ತದೆ. ಹಾಡಿದ್ದಕ್ಕೆ ಪ್ರತಿಯಾಗಿ ಪಡೆಯುವುದು ಕೇವಲ ಎಲೆ ಅಡಿಕೆ ಮಾತ್ರ. ಇವರಾಡುವ ಸೋಬಾನೆ ಪದಗಳು ವಿವಾಹ ಕಾರ್ಯಕ್ರಮಕ್ಕೆ ವಿಶೇಷ ಮೆರುಗನ್ನು ನೀಡುತ್ತವೆ. ಹಾಡುಗಳಲ್ಲಿ ವಧುವರರಿಗೆ, ಅತ್ತೆ ಮಾವಂದಿರಿಗೆ ಮಾರ್ಗದರ್ಶನವಿರುತ್ತದೆ. ಕೇಳುಗರಿಗೆ ಮನೋರಂಜನೆಯ ಜೊತೆಗೆ ಜೀವನ ಪಾಠವಿರುತ್ತದೆ. ತಡರಾತ್ರಿಯವರೆಗೂ ನಿಸ್ವಾರ್ಥ ಮನೋಭಾವದಿಂದ ಇವರಾಡುವ ಸೋಬಾನೆ ಪದಗಳು ತಲತಲಾಂತರಗಳ ಮೌಖಿಕ ಸಾಹಿತ್ಯವನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುತ್ತಿವೆ. ಇಷ್ಟೇ ಅಲ್ಲದೆ ಊರಲ್ಲಿ ಜರುಗುವ ಯಾವುದೇ ರೀತಿಯ ಹಬ್ಬ, ಜಾತ್ರೆ, ಉತ್ಸವಗಳಲ್ಲಿ ದೇವರನಾಮಗಳನ್ನು ಇವರ ತಂಡ ಹಾಡುತ್ತದೆ.

‘ಈಗೀಗ ಕಾಲ್ ನೋವು ಜಾಸ್ತಿ ಆಗ್ಯಾತಾ. ಮದಲಿನಂಗ ಬಾಳ ಹೊತ್ತು ಕುಂತ್ಕಂಡು ಹಾಡಕ್ ಆಗುವಲ್ದು. ಆದ್ರೂ ಇಲ್ಲ ಅಂದಂಗ ಕರ್ದರ್ ಮನೆ ಹತ್ರ ಹೋಗಿ, ಸೋಬಾನೆ ಹಾಡು ಹೇಳ್ತಿವಿ’ ಅಂತಾರೆ ಕೆಂಚಮ್ಮ.

ಆಧುನಿಕತೆಯ ಭರಾಟೆಯಲ್ಲಿ ವೈಭವದ ಕಡೆ ಸಾಗುತ್ತಿರುವ ವಿವಾಹ ಕಾರ್ಯಕ್ರಮಗಳಲ್ಲಿ ಸೋಬಾನೆ ಪದಗಳು ಕಾಣೆಯಾಗುತ್ತಿವೆ. ಹಳ್ಳಿಗಳಲ್ಲಿ ಮಾತ್ರ ಆಗೊಮ್ಮೆ ಈಗೊಮ್ಮೆ ಇಂತಹ ಪದಗಳನ್ನು ಕೇಳುವ ಸದವಕಾಶ ದೊರೆಯುತ್ತದೆ. ಕಳೆದ 30–40 ವರ್ಷಗಳಿಂದ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಎಲೆಮರೆಕಾಯಿಯಂತೆ ಜನಪದ ಸೊಗಡನ್ನು ಉಳಿಸಿಕೊಂಡು ಹೊರಟಿರುವ ಕೆಂಚಮ್ಮ ಅವರಂಥವರು ಕನ್ನಡದ ನಿಜ ರಾಯಭಾರಿಗಳು.

—ಶೇಖರಯ್ಯ ಟಿ.ಎಚ್.ಎಂ., ವಿಜಯನಗರ

## ಮೂರ್ಖರಾದ ಆ ದಿನ!



ಮೂರ್ಖರಾಗುವ ಪ್ರಸಂಗ ಎಲ್ಲರ ಜೀವನದಲ್ಲಿ ಒಮ್ಮೆಯಾದರೂ ನಡೆದೇ ಇರುತ್ತದೆ. ಏನೇ ಜಾಣತನದಿಂದಿದ್ದರೂ ನಾವೆಷ್ಟೇ ಚಾಲಾಕಿ ಎಂದುಕೊಂಡಿದ್ದರೂ ಗೊತ್ತೋ ಗೊತ್ತಿಲ್ಲದೆಯೋ ಬೇಸ್ತು ಬೀಳುವ ಸಂಗತಿಯಂತೂ ಸಂಭವಿಸಿಯೇ ಇರುತ್ತದೆ. ಅದು ಆ ಕ್ಷಣಕ್ಕೆ ಮುಜುಗರ, ಬೇಸರ, ಕೋಪ ತರಿಸಿದ್ದರೂ ಕಾಲ ಕಳೆದಂತೆ ಒಂದು ನೆನಪಾಗಿ, ಮನದಲ್ಲಿ ನಗು ಮೂಡಿಸುತ್ತದೆ. ಅಂಥ ಸ್ವಾರಸ್ಯಕರ ಪ್ರಸಂಗ ನಿಮ್ಮ ಜೀವನದಲ್ಲಿಯೂ ನಡೆದಿದೆಯೇ? ನೀವು ಮೂರ್ಖರಾದ ಆ ಸಂಗತಿ ಯಾವುದು? ನಿಮ್ಮ ಅನುಭವವನ್ನು ‘ಸುಧಾ’ದೊಂದಿಗೆ ಹಂಚಿಕೊಳ್ಳಬಹುದು. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಏಪ್ರಿಲ್ 30. ಬರಹ ಕಳುಹಿಸಬೇಕಾದ ವಿಳಾಸ: editorsu@sudha.co.in